ಪುಸ್ತಕದಲ್ಲಿ ಓದಿದ್ದ ಹುಡುಗನಿಗೆ ಹುಡುಗಿಯ ದರ್ಶನವಿಲ್ಲದೆ ಪ್ರೀತಿ ಆರೋಗ್ಯ ಪೂರ್ಣ ಚೈತನ್ಯವನ್ನು ಹೊಮ್ಮಿಸತೊಡಗಿತು. 'ನೀನು ನನ್ನ ಮುದ್ದಿನ ಚೆಲುವ ಮಾತ್ರಾ ಇರಬಹುದು ಎಂದುಕೊಂಡಿರುವೆ' ಎಂದು ನವಿರು ಪ್ರೀತಿ ಮೇಲೆ ಹುಡುಗಿ ಎಬ್ಬಿಸಿದ ಶಂಕೆಯನ್ನು ಇನ್ನಿಲ್ಲದಂತೆ ನಿವಾರಿಸಿ ಆಕೆಯ ನಂಬಿಕೆ ಚಿರಾಯುವಾಗಲಿ ಎಂದು ಹಾರೈಸಿದ.

ಇಬ್ಬರು ತುಂಟ–ತುಂಟಿಯರ ನಡುವೆ ಸೇತುವೆಯಂತೆ ಕೆಲಸ ಮಾಡಿದವರು ಅಂಚೆಯ ಅಣ್ಣಂದಿರು. ಹುಡುಗನ ಊರಿಗೆ ಸೈಕಲ್ ಹೊಡೆಯುತ್ತಾ ಕಾಗದ ತಂದೊಪ್ಪಿಸುತ್ತಿದ್ದ ಪೋಸ್ಟ್‌ಮ್ಯಾನ್ ಹುಡುಗನಿಗೆ ಈ ಬಗೆಯಲ್ಲಿ ಪತ್ರಗಳ ವಿಲೇವಾರಿ ಮಾಡಿ ಗಿರಕಿ ಹೊಡೆಯಲು ತೊಡಗಿದ್ದ. ಅತ್ತ ಹುಡುಗಿಯ ಕಡೆಯ ಪೋಸ್ಟ್‌ಮ್ಯಾನ್ ತನ್ನ ಸೇವಾವಧಿಯಲ್ಲಿ ಒಬ್ಬಳು ಹುಡುಗಿಗೇ ಪ್ರತಿನಿತ್ಯ ಈ ಮಾದರಿಯಲ್ಲಿ ಪತ್ರ ಸಾಗಿಸಿದ ಅನುಭವವಿರದೆ ಆಕೆ ಬಿದ್ದಿರಬಹುದಾದ ಲವ್ವು ವಹಿವಾಟಿನ ಬಗ್ಗೆ ಅಚ್ಚರಿಗೊಳ್ಳುತ್ತಿದ್ದ.

ಕೊನೆಗೊಂದು ದಿನ ಹುಡುಗಿಯೇ ಮುಂದಾದಳು. ತನ್ನೂರಿಗೆ ಮುಂದಿನ ತಿಂಗಳು ಬರುವಂತೆ ಕೇಳಿಕೊಂಡಳು. ಇಬ್ಬರೂ ಪರಸ್ಪರ ಭೇಟಿ ಆಗುವುದು ಉಚಿತವೆಂದು ಸೂಚಿಸಿದಳು. ಎಂದೂ ಕಾಣದ ಎರಡು ಮುಖಗಳ ಭೇಟಿಗೆ ಎಂದೂ ಅರಿಯದ ಎರಡು ಅಗೋಚರ ಸ್ತ್ರೀ–ಪುರುಷ ಚೇತನಗಳ ಪ್ರೇಮ ಪರ್ವಕ್ಕೆ ಎರಡು ಅನಾಮಿಕ ಜೀವಿಗಳ ಸಮ್ಮಿಲನಕ್ಕೆ ವ್ಯಾಖ್ಯೆಯಿಲ್ಲದ ಶಕ್ತಿಯೊಂದು ಸಿದ್ಧತೆ ನಡೆಸಿತು. ಅತ್ತ ಹುಡುಗಿ ಇತ್ತ ಹುಡುಗ ಈ ಪ್ರೀತಿಯ ರೀತಿಗೆ ಮನಸೋ ಬೆಚ್ಚುತ್ತಾ, ಥಂಡವಾಗುತ್ತಾ ಕಾರಣಗಳನ್ನರಸುತ್ತಾ ಸಂತೋಷಪಡುತ್ತಾ ಇದ್ದಂತೆಯೇ ಈ ಕಥೆ ಮುಕ್ತಾಯವಾಗುತ್ತದೆ.

ಮುಕ್ತಾಯಕ್ಕೆ ಮುನ್ನ:

ಕಥೆಯನ್ನು ಸಾಂಪ್ರದಾಯಿಕವಾಗಿ ಅಂತ್ಯಗೊಳಿಸೋಣ. ಆದರೆ ಇದ್ದಕ್ಕಿದ್ದಂತೆ ಮುಕ್ತಾಯ ಹೇರುವುದರಿಂದ ಓದುಗರಿಗೆ ಅನ್ಯಾಯವಾಗುತ್ತದೆ. ಅದಕ್ಕೆಂದೇ ಮುಕ್ತಾಯಕ್ಕೆ ಮುನ್ನ ಕೆಲವು ಊಹೆಗಳನ್ನು ಟಿಪ್ಪಣಿ ಮಾಡಿ ನೋಡೋಣ. ಇದನ್ನೆಲ್ಲಾ ಈ ರೀತಿಯಲ್ಲೇ ಓದುಗರು ಊಹಿಸಬೇಕೆಂದೇನೂ ಇಲ್ಲ. ಇನ್ನೊಂದೇ ರೀತಿಯಲ್ಲಿ ಊಹಿಸಬಹುದು; ಅಡ್ಡಿಯಿಲ್ಲ. ಈಗಾಗಲೇ ಪ್ರಚಲಿತವಿರುವ ಲಕ್ಷೋಪಲಕ್ಷ ಪ್ರೇಮ ಕಥೆಗಳಲ್ಲಿ ಕೂಡಾ ಇಂಥ ಅಂತ್ಯಕ್ಕೇ ಸ್ಪಷ್ಟ ಕಾರಣಗಳು ಈ ರೀತಿಯಲ್ಲೇ ಇರಬಹುದು.

1. ಹುಡುಗ ಬರೆದ ಪತ್ರವೊಂದು ಹುಲಿಯಂತಿರುವ ಹುಡುಗಿಯ ಅಪ್ಪನಿಗೆ ದೊರಕಿತು ಅಥವಾ ಅಮ್ಮನಿಗೆ ಸಿಕ್ಕಿ ಅಪ್ಪನಿಗೆ ಹಸ್ತಾಂತರವಾಯಿತು.
2. ಹುಡುಗಿ ಇನ್ನೊಬ್ಬ ಸರ್ವಸಂಪನ್ನ ಹುಡುಗನ ಪ್ರೀತಿಯ ತೆಕ್ಕೆಗೆ ಬಿದ್ದಿರಬಹುದು.
3. ಹುಡುಗಿಗೆ ಮದುವೆ ನಿಶ್ಚಯವಾಗಿರಬಹುದು.
4. ಈ ಅಪರಿಚಿತ ಪ್ರೇಮದ ವೈಖರಿಯೇ ಕುತರ್ಕದ್ದು, ನಾನ್‌ಸೆನ್ಸ್ ಎಂದು ಹುಡುಗಿಗೆ ಜ್ಞಾನೋದಯವಾಗಿರಬಹುದು.
5. ಹುಡುಗಿ ಇಡೀ ಪ್ರೀತಿಯನ್ನು ಆಟವಾಡಿದ್ದಿರಬಹುದು. ಕೇವಲ ತುಂಟಾಟ, Just for a jolly.
6. ಅಸಲು ಈಕೆ ಹುಡುಗಿಯೇ ಅಲ್ಲ. ಕಲ್ಪನೆಯ ಹೆಸರಿನ ಹುಡುಗ, ಇನ್ನೊಬ್ಬ ಹುಡುಗನನ್ನು ಫೂಲ್ ಮಾಡಿದ್ದು ಇರಬಹುದು.

ಇಂಥ ಎಷ್ಟೊಂದು ತರ್ಕಗಳಲ್ಲಿ ಮುಂದುವರಿಯೋಣ ಹೇಳಿ. ಆದ್ದರಿಂದ ಕಥೆಯನ್ನು ಕೂಡಲೇ ಮುಗಿಸಿಬಿಡೋಣ, ಏಕೆಂದರೆ ಈ ಕಥೆಯ ಅವಧಿ ಕೂಡಾ ತೀರಾ ಕಮ್ಮಿ ಸಮಯದ್ದು.